# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **280 (371)** |
| **ಸದಸ್ಯರ ಹೆಸರು** | : | **ಶ್ರೀ ಎಂ ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **07.07.2023** |
| **ಉತ್ತರಿಸುವವರು** | : | **ಮಾನ್ಯಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು** |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟು ಶೌಚಾಲಯಗಳನ್ನು ನಿರ್ಮಿಸಲಾಗಿದೆ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಂದ ಅನುದಾನವೆಷ್ಟು ಮತ್ತು ರಾಜ್ಯ ಸರ್ಕಾರದಿಂದ ಖರ್ಚು ಮಾಡಿರುವ ಹಣವೆಷ್ಟು;</td><td>ಸ್ವಚ್ಛ ಭಾರತ್ ಮಿಷನ್ (ಗ್ರಾ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಲು ಹಾಗೂ ಸದರಿ ಯೋಜನೆಗೆ ಕೇಂದ್ರ ಸರ್ಕಾರದಿಂದ ಬಂದ ಅನುದಾನ ಮತ್ತು ರಾಜ್ಯ ಸರ್ಕಾರದಿಂದ ಖರ್ಚು ಮಾಡಿರುವ ಹಣವನ್ನು ಕೆಳಕಂಡ ಕೋಷ್ಟಕದಲ್ಲಿ ನೀಡಲಾಗಿದೆ.
<table>
<tr><th>ವರ್ಷ</th><th>ಶೌಚಾಲಯಗಳ ಪ್ರಗತಿ</th></tr>
<tr><td>2020-21</td><td>179188</td></tr>
<tr><td>2021-22</td><td>95811</td></tr>
<tr><td>2022-23</td><td>13915</td></tr>
</table>
(ರೂ.ಲಕ್ಷಗಳಲ್ಲಿ)
<table>
<tr><th rowspan="2">Year</th><th rowspan="2">Opening Balance</th><th colspan="3">Releases</th><th rowspan="2">Total Available Fund</th><th colspan="3">Expenditure</th></tr>
<tr><th>Centre</th><th>State</th><th>Total</th><th>Centre</th><th>State</th><th>Total</th></tr>
<tr><td>2020-21</td><td>852.62</td><td>126.31</td><td>35.52</td><td>161.83</td><td>1014.45</td><td>315.64</td><td>70.65</td><td>386.29</td></tr>
<tr><td>2021-22</td><td>686.32</td><td>0</td><td>0</td><td>0</td><td>686.32</td><td>252.51</td><td>129.75</td><td>382.26</td></tr>
<tr><td>2022-23</td><td>354.96</td><td>155.84</td><td>129.38</td><td>285.22</td><td>640.18</td><td>134.61</td><td>79.79</td><td>214.4</td></tr>
<tr><td>TOTAL</td><td></td><td>282.15</td><td>164.9</td><td>447.05</td><td>2340.95</td><td>702.76</td><td>280.19</td><td>982.95</td></tr>
</table></td></tr>
<tr><td>(ಆ)</td><td>ಈಗಲೂ ಸಹ ಗ್ರಾಮೀಣ ಪ್ರದೇಶಗಳಲ್ಲಿ ಬಯಲು ಬಹಿರ್ದೆಸೆ ಜೀವಂತವಾಗಿದ್ದು ಸಾರ್ವಜನಿಕರು ಶೌಚಾಲಯಗಳಿಲ್ಲದೆ ಬಹಿರ್ದೆಸೆಗಾಗಿ ತೆರೆದ ಪ್ರದೇಶಗಳನ್ನು ಉಪಯೋಗಿಸಿಕೊಳ್ಳುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ ಶೌಚಾಲಯಗಳನ್ನು ನಿರ್ಮಿಸಲು ಸರ್ಕಾರದ ಯೋಜನೆಗಳೇನು;</td><td>ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಈವರೆವಿಗೂ ಸುಮಾರು 50 ಲಕ್ಷ ಶೌಚಾಲಯ ರಹಿತ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗಿರುತ್ತದೆ.<br><br>ರಾಜ್ಯದಲ್ಲಿ ಶೌಚಾಲಯ ರಹಿತ ಕುಟುಂಗಳಿಗೆ ಶೌಚಾಲಯಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಕೆಲವು ಗ್ರಾಮಗಳಲ್ಲಿ ಶೌಚಾಲಯ ನಿರಂತರ ಬಳಕೆಯಾಗದಿರುವುದು ಕಂಡುಬಂದಿರುತ್ತದೆ. ಅಲ್ಲದೆ, ಶೌಚಾಲಯಗಳ ಬಳಕೆ ಸಂಬಂಧಿಸಿದಂತೆ ಅವರ ನಡವಳಿಕೆಯಲ್ಲಿ ಬದಲಾವಣೆ ತರಲು ಹಲವು ರೀತಿಯ ಮಾಹಿತಿ ಶಿಕ್ಷಣ ಮತ್ತು ಸಂವಹನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>ಆರ್ಥಿಕವಾಗಿ ಹಿಂದುಳಿತ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಂಡ ಕುಟುಂಬಗಳು ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹಿಸುವ ಉದ್ದೇಶದಿಂದ ಯೋಜನೆಯಡಿ ವೈಯಕ್ತಿಕ ಗೃಹ ಶೌಚಾಲಯ ನಿರ್ಮಾಣಕ್ಕೆ ಲಭ್ಯವಿರುವ ರೂ.12,000/- ಜೊತೆಗೆ ರಾಜ್ಯ ಎಸ್.ಸಿ.ಪಿ ಮತ್ತು ಟಿ.ಎಸ್.ಪಿ ಅಡಿ ಹೆಚ್ಚುವರಿಯಾಗಿ ರೂ.8,000/-)ಗಳನ್ನು ಸೇರಿಸಿ ರೂ.20,000/- ಗಳನ್ನು ನೀಡಲಾಗುತ್ತಿದೆ.</td></tr>
</table>

| | | |
|---|---|---|
| | | ಪ್ರಸ್ತುತ ಶೌಚಾಲಯ ರಹಿತ ಕುಟುಂಬಗಳಿಗೆ ಶೌಚಾಲಯಗಳನ್ನು ನಿರ್ಮಣ ಮಾಡಲು ಕೇಂದ್ರ ಸರ್ಕಾರವು Citizen App ಅನ್ನು ಜಾರಿಗೆ ತಂದಿದ್ದು, ಈ App ನಲ್ಲಿ ಶೌಚಾಲಯ ರಹಿತ ಫಲಾನುಭವಿಗಳು ನೇರವಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಈ ರೀತಿ ಅರ್ಜಿಗಳನ್ನು ಸ್ವೀಕರಿಸಿದ ನಂತರ, ಗ್ರಾಮ ಪಂಚಾಯಿತಿ/ ಜಿಲ್ಲಾ ಪಂಚಾಯಿತಿ ಹಂತದಲ್ಲಿ ಪರಿಶೀಲಿಸಿ, ಅರ್ಹ ಫಲಾನುಭವಿಗಳಿಗೆ ಶೌಚಾಲಯಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ. ಅದರಂತೆ, ಈವರೆಗೆ 1.63 ಲಕ್ಷಗಳ ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, ಶೌಚಾಲಯ ನಿರ್ಮಾಣದ ಕಾರ್ಯ ಪ್ರಗತಿಯಲ್ಲಿದೆ.<br><br>ಪ್ರಸ್ತುತ ಸ್ವಚ್ಛ ಭಾರತ ಮಿಷನ್ (ಗ್ರಾ) ವೈಯಕ್ತಿಕ ಗೃಹ ಶೌಚಾಲಯ ನಿರ್ಮಾಣಕ್ಕೆ ಸ್ಥಳದ ಅಭಾವವಿರುವಂತಹ ಕುಟುಂಬಗಳಿಗೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಸಮುದಾಯ ಶೌಚಾಲಯ ಸಂಕೀರ್ಣಗಳನ್ನು ನಿರ್ಮಿಸುವಲ್ಲಿ ಕ್ರಮವಹಿಸಲಾಗುತ್ತಿದೆ. |

**(ಪ್ರಿಯಾಂಕ್ ಖರ್ಗೆ)**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು